ಅ) ಸಣ್ಣ ನೀರಾವರಿ ಮೂಲಕ ರಾಜ್ಯದಲ್ಲಿ ಎಷ್ಟು ಏಕರೆ ನೀರಾವರಿಯಾಗುತ್ತಿದೆ; ನಬಾರ್ಡ್‌ನಿಂದ ಹೆಚ್ಚು ಹಣವನ್ನು ಈ ಇಲಾಖೆಗೆ ಪಡೆಯಲು ಪ್ರಯತ್ನಿಸಲಾಗಿದೆಯೇ; ಮತ್ತು ವಿಶ್ವಬ್ಯಾಂಕಿನಿಂದ ಈ ಅಭಿವೃದ್ಧಿ ಕಾರ್ಯಗಳಿಗೆ ನೆರವನ್ನೇನಾದರೂ ಪಡೆಯಲಾಗುತ್ತಿದೆಯೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗವು, ರಾಜ್ಯದಲ್ಲಿ ಅಂತರ್ಜಲವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಕೃತಕ ಮರು ಪೂರೈಕೆಯ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದೆ. ಅಂತಹ ರಚನೆಗಳಾದ ಅಡ್ಡಗೋಡೆ ನಿರ್ಮಾಣ, ಗಲ್ಲಿಪ್ಪಗ್ಗಿಂಗ್, ನೀರು ಸೋಸುವಿಕೆಯ ಸಣ್ಣ ಹೊಂಡಗಳನ್ನು ಕಟ್ಟುವುದು, ಕೃತಕ ''ಡೈಕ್'' ಗಳು ಇತ್ಯಾದಿ ರಚನೆಗಳಾಗಿವೆ. ಕೊಡಗು ಜಿಲ್ಲೆಯನ್ನು ಹೊರತು ಪಡಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಸಣ್ಣ ನೀರಾವರಿ ಅಂದರೆ ಕೆರೆಗಳು, ಏತ ನೀರಾವರಿ, ಪಿಕಪ್ ಮತ್ತು ಬಂದರುಗಳ ಮೂಲಕ ರಾಜ್ಯದಲ್ಲಿ 9, 12,070 ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಲಾಗುತ್ತಿದೆ. 798.00 ಲಕ್ಷ ರೂ.ಗಳ ನೆರವನ್ನು ನಬಾರ್ಡ್ ಆರ್.ಐ.ಡಿ.ಎಫ್ - 3ರಲ್ಲಿ ಕೋರಲಾಗಿದೆ. ವಿಶ್ವ ಬ್ಯಾಂಕ್‌ನಿಂದ ಸಣ್ಣ ನೀರಾವರಿಗೆ ಸಂಬಂಧಿಸಿದಂತೆ ಯಾವ ನೆರವನ್ನು ಕೋರಿರುವುದಿಲ್ಲ.

ಅಂತರ್ಜಲವನ್ನು ಉಪಯೋಗಿಸಿ ರಾಜ್ಯದಾದ್ಯಂತ ಸುಮಾರು 30 ಲಕ್ಷ ಎಕರೆ ಪ್ರದೇಶದಲ್ಲಿ ನೀರಾವರಿಯನ್ನು ಮಾಡಲಾಗುತ್ತಿದೆ. ಈ ಕಾರ್ಯಕ್ರಮಕ್ಕಾಗಿ ನಬಾರ್ಡ್ ಸಂಸ್ಥೆಗೆ 18.50 ಕೋಟಿ ರೂಪಾಯಿಗಳ ಅಂದಾಜು ಮೊತ್ತದ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ, ನಬಾರ್ಡ್‌ನಿಂದ ಪ್ರಸ್ತಾವನೆಗೆ ಮಂಜೂರಾತಿ ದೊರೆತಿರುವುದಿಲ್ಲ. ರಾಜ್ಯದಾದ್ಯಂತ ಅಂತರ್ಜಲದ ಸ್ಥಿತಿ-ಗತಿ ಹಾಗೂ ಅದರ ಗುಣ ಮತ್ತು ಪ್ರಮಾಣವನ್ನು ಲೆಕ್ಕಾಚಾರ ಮಾಡಲು, ಐದು ವರ್ಷಗಳ ಅವಧಿಗೆ, ಜಲ ವಿಜ್ಞಾನ ಯೋಜನೆಯಡಿಯಲ್ಲಿ 13.63 ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕ್ ನೆರವಿನಿಂದ ನಿಗದಿಪಡಿಸಲಾಗಿದೆ.

ನೂತನ ಪಡಿತರ ಚೀಟಿಯನ್ನು ಒದಗಿಸುವುದು

330 (611) ಶ್ರೀ ಪಿ. ಎಸ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ರಾಜ್ಯದಲ್ಲಿ ನೂತನವಾಗಿ ಪಡಿತರ ಚೀಟಿ ಕೊಡುವುದನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

2. ಕಾರ್ಡೊಂದಕ್ಕೆ ನಿಗಧಿತ ಸೀಮೆ ಎಣ್ಣೆಯ ಪ್ರಮಾಣವೆಷ್ಟು; ಹಾಗಿದ್ದಲ್ಲಿ ಪ್ರಸಕ್ತ ನೀಡುತ್ತಿರುವ ಪ್ರಮಾಣ ಅತಿ ಕಡಿಮೆಯಾಗಿರುವುದರಿಂದ, ಸೀಮೆ ಎಣ್ಣೆ ಪ್ರಮಾಣ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

3. ಹಾಗಿದ್ದಲ್ಲಿ ಯಾವಾಗ ಹೆಚ್ಚು ಪ್ರಮಾಣದಲ್ಲಿ ಸೀಮೆ ಎಣ್ಣೆಯನ್ನು ವಿತರಣೆ ಮಾಡಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1. ಸರ್ಕಾರವು ರಾಜ್ಯದಲ್ಲಿ ಹೊಸ ಪಡಿತರ ಚೀಟಿಗಳನ್ನು ವಿತರಿಸುತ್ತಿದೆ

2. ಕಾರ್ಡೊಂದಕ್ಕೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಸೀಮೆ ಎಣ್ಣೆಯ ವಿತರಣಾ ಪ್ರಮಾಣವು ಈ ಕೆಳಕಂಡಂತಿರುತ್ತದೆ.

ಆ. ಪ. ಪ್ರದೇಶ	-	10 ರಿಂದ 15 ಲೀಟರ್‌ಗಳು
ಪಟ್ಟಣ	-	6 ರಿಂದ 10 ಲೀಟರ್‌ಗಳು
ಗ್ರಾಮಾಂತರ	-	4 ರಿಂದ 6 ಲೀಟರ್‌ಗಳು

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಹಂಚಿಕೆಯಾಗುತ್ತಿರುವ ಸೀಮೆ ಎಣ್ಣೆಯ ಪ್ರಮಾಣವು ಪಡಿತರ ಚೀಟಿದಾರರ ಬೇಡಿಕೆಯನ್ನು ಪೂರೈಸಲು ಸಾಕಾಗುತ್ತಿಲ್ಲವಾದ ಕಾರಣ ಈಗ ಹಂಚಿಕೆಯಾಗುತ್ತಿರು 54940 ಕೆ. ಎಲ್. ಪ್ರಮಾಣವನ್ನು 75,000 ಕೆ. ಎಲ್. ಗಳಿಗೆ ಹೆಚ್ಚಿಸ ಬೇಕೆಂದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

3. ಕೇಂದ್ರ ಸರ್ಕಾರದಿಂದ ಹೆಚ್ಚಿನ ಪ್ರಮಾಣದ ಸೀಮೆ ಎಣ್ಣೆ ಬಿಡುಗಡೆ ಯಾವಾಗ ಪ್ರತಿ ಪಡಿತರ ಚೀಟಿಗೆ ಹೆಚ್ಚು ಸೀಮೆ ಎಣ್ಣೆಯನ್ನು ವಿತರಣೆ ಮಾಡಲಾಗುವುದು.

ಬೆಂಗಳೂರು ನಗರದಲ್ಲಿ ಬೀದಿ ದೀಪಗಳ ವ್ಯವಸ್ಥೆ

331(610) ಶ್ರೀ ಪಿ. ಎಸ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಬೆಂಗಳೂರು ನಗರದಲ್ಲಿರುವ ಬೀದಿ ದೀಪಗಳ ಸಂಖ್ಯೆ ಎಷ್ಟು?

2. ಬೀದಿ ದೀಪಗಳನ್ನು ಎಷ್ಟು ದಿವಸಗಳಿಗೊಂದು ಬಾರಿ ದುರಸ್ತಿ ಮಾಡಲಾಗುವುದು

3. ಬೀದಿ ದೀಪಗಳು ಸಾಕಷ್ಟು ಪ್ರಮಾಣದಲ್ಲಿ ದುರಸ್ಥಿಯಲ್ಲಿರುವುದರಿಂದ ತಿಂಗಳಿಗೊಂದು ಬಾರಿ ದುರಸ್ಥಿ ಕಾರ್ಯಕ್ರಮ ಹಾಕಿಕೊಳ್ಳಲಾಗುವುದೇ?

4. ಹಾಗಿದ್ದಲ್ಲಿ ಎಂದಿನಿಂದ ಕಾರ್ಯಕ್ರಮವನ್ನು ಜಾರಿಗೆ ತರಲಾಗುವುದು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1. ಬೆಂಗಳೂರು ನಗರದಲ್ಲಿ : ಬೀದಿ ದೀಪಗಳು ಒಟ್ಟು 79723

2. ದುರಸ್ತಿಯಲ್ಲಿರುವ ರಸ್ತೆ ದೀಪಗಳನ್ನು ರಸ್ತೆ ದೀಪಗಳ ವಿಭಾಗಕ್ಕೆ ಕಾಲ ಕಾಲಕ್ಕೆ ಸರಿಪಡಿಸುತ್ತಿದೆ.